**ಕರ್ನಾಟಕ ಸರ್ಕಾರ**

**ಸಹಕಾರ ಚುನಾವಣಾ ಆಯೋಗ**

ಸಂಖ್ಯೆ: ಸಚುಆ/ಪದಧಾರಣ/51/2013-14

ಕರ್ನಾಟಕ ರಾಜ್ಯ ಸಹಕಾರ ವಸತಿ ಮಹಾಮಂಡಳದ ಕಟ್ಟಡ,
ನಂ.3, 2ನೇ ಮಹಡಿ, ಕರಿಯಪ್ಪ ರಸ್ತೆ,
ಬಸವನಗುಡಿ(ಕೃಷ್ಣರಾವ್ ಪಾರ್ಕ್ ಮುಂಭಾಗ)
ಬೆಂಗಳೂರು-560004 ದಿನಾಂಕ: 21 .02.2014

**-:ಸುತ್ತೋಲೆ:-**

**ವಿಷಯ:-** ಹೊಸದಾಗಿ ಚುನಾಯಿತವಾದ ಸಹಕಾರ ಸಂಘಗಳ ಮಂಡಲಿಯ ಸದಸ್ಯರು ನಿರ್ಗಮಿಸುತ್ತಿರುವ ಮಂಡಲಿಯ ಪದಾವಧಿಯು ಮುಕ್ತಾಯವಾದ ಕೂಡಲೇ ಪದಧಾರಣ ಮಾಡುವ ಕುರಿತು.

**ಉಲ್ಲೇಖ:-** ಆಯೋಗದ ಅಧಿಸೂಚನೆ ಸಂಖ್ಯೆ:ಸಚುಆ/31/ಚುನಾವಣೆ/2014/ 2013-14, ದಿನಾಂಕ:30.10.2013

***

ಪ್ರಾಥಮಿಕ ಸಹಕಾರ ಸಂಘಗಳ /ಸಹಕಾರಿಗಳ ಆಡಳಿತ ಮಂಡಲಿಗೆ ಚುನಾವಣೆ ನಡೆಸುವ ಸಂಬಂಧ ಆಯೋಗವು ಉಲ್ಲೇಖಿತ ಅಧಿಸೂಚನೆಯಲ್ಲಿ ಚುನಾವಣೆ ನಡೆಸಬೇಕಾದ ಅವಧಿ / ದಿನಾಂಕಗಳನ್ನು ನಿಗದಿಪಡಿಸಿದೆ ಅದರಂತೆ ದಿನಾಂಕ:02.02.2014, 09.02.2014, 16.02.2014, 17.02.2014, 23.02.2014 ಹಾಗೂ 02.03.2014 ರಂದು ವಿವಿಧ ವರ್ಗಗಳ ಪ್ರಾಥಮಿಕ ಸಹಕಾರ ಸಂಘಗಳು ಮಂಡಲಿ ಚುನಾವಣೆಗಳನ್ನು ಮತ್ತು ತತ್ಪರಿಣಾಮದ ಪದಾಧಿಕಾರಿಗಳ ಚುನಾವಣೆಗಳನ್ನು ನಡೆಸಲು ನಿರ್ದೇಶಿಸಿರುತ್ತದೆ. ದಿನಾಂಕ:31.03.2014ಕ್ಕೆ ಮಂಡಲಿಯ ಪದಾವಧಿಯು ಮುಗಿಯಲಿರುವ ಪ್ರಕರಣಗಳಲ್ಲಿ ಪ್ರಾಥಮಿಕ ಸಹಕಾರ ಸಂಘಗಳು/ ಸಹಕಾರಿಗಳಿಗೆ ಸಂಬಂಧಿಸಿದಂತೆ ಮುಂದಿನ ಅವಧಿಗೆ ಚುನಾವಣೆ ನಡೆಸುವ ಬಗ್ಗೆ ಆಯೋಗ ಕ್ರಮ ಕೈಗೊಂಡಿದ್ದು, 2014ರ ಮಾರ್ಚ್ ಮಾಹೆಯಲ್ಲಿ ಶಾಲಾ ಕಾಲೇಜುಗಳಲ್ಲಿ ವಾರ್ಷಿಕ ಅಂತಿಮ ಪರೀಕ್ಷೆಗಳು ನಿಗದಿಯಾಗುವ ಕಾರಣ ಶಿಕ್ಷಣ ಇಲಾಖೆಯ ಅಧಿಕಾರಿಗಳು /ಸಿಬ್ಬಂದಿ /ಕಟ್ಟಡಗಳ ಲಭ್ಯತೆ ಸಾಧ್ಯವಾಗದಿರುವ ಅಂಶಗಳನ್ನು ಗಮನದಲ್ಲಿಟ್ಟುಕೊಂಡು 2014ರ ಫೆಬ್ರವರಿ ಮಾಹೆಯಿಂದಲೇ ಪ್ರಾಥಮಿಕ ಹಂತದ ಹಾಗೂ ಸಹಕಾರ ಸಂಘಗಳಿಗೆ /ಸಹಕಾರಿಗಳಿಗೆ ಸಂಬಂಧಿಸಿದಂತೆ ಮಂಡಲಿಗಳ ಸಾಮಾನ್ಯ ಚುನಾವಣೆ ಮತ್ತು ತತ್ಪರಿಣಾಮದ ಪದಾಧಿಕಾರಿಗಳ ಚುನಾವಣೆಗಳನ್ನು ನಡೆಸುವುದು ಸೂಕ್ತವೆಂದು ಆಯೋಗ ತಿರ್ಮಾನಿಸಿ ಉಲ್ಲೇಖಿತ ಅಧಿಸೂಚನೆಯಂತೆ ದಿನಾಂಕ: 02.02.2014 ರಿಂದ 02.03.2014ರ ವರೆಗೆ ಒಟ್ಟು 6 ಬೇರೆ ಬೇರೆ ದಿವಸಗಳಲ್ಲಿ ವಿವಿಧ ವರ್ಗಗಳ ಸಹಕಾರ ಸಂಘಗಳ ಸಹಕಾರಿಗಳ ಚುನಾವಣೆ ದಿನಾಂಕಗಳನ್ನು ನಿಗಧಿಪಡಿಸಿದೆ.

ಆಯೋಗದ ಉಲ್ಲೇಖಿತ ಅಧಿಸೂಚನೆಯಲ್ಲಿ, ಅಧಿನಿಯಮ ಪ್ರಕರಣ 28ಬಿ ರೀತ್ಯಾ ಹೊಸದಾಗಿ ಚುನಾಯಿತವಾದ ಮಂಡಲಿಯ ಸದಸ್ಯರು ನಿರ್ಗಮಿಸುತ್ತಿರುವ ಮಂಡಲಿಯ ಪದಾವಧಿಯು ಮುಕ್ತಾಯವಾದ ಕೂಡಲೇ ಪದಧಾರಣೆ ಮಾಡಲು ಅವಕಾಶ ಮಾಡುವ ಉದ್ದೇಶದಿಂದ ಈ ಕ್ರಮ ಕೈಗೊಳ್ಳಲಾಗಿದೆ ಎಂಬ ಅಂಶವನ್ನು ಸ್ಪಷ್ಟಪಡಿಸಲಾಗಿದೆ.

---2

ದಿನಾಂಕ:18.02.2014ರಂದು ಮೈಸೂರು ಪ್ರಾಂತ್ಯದ ಸಹಕಾರ ಸಂಘಗಳ ಜಂಟಿ ನಿಬಂಧಕರು ಮೇಲ್ಕಂಡ ವಿಷಯದ ಬಗ್ಗೆ ಪ್ರಸ್ತಾಪಿಸಿ ದಿನಾಂಕ:02.02.2014 ರಿಂದ 02.03.2014ರ ಅವಧಿಯಲ್ಲಿನ ನಿಗಧಿಪಡಿಸಿದ ವಿವಿಧ ದಿನಾಂಕಗಳಲ್ಲಿ ಆಯೋಗವು ವಿವಿಧ ವರ್ಗಗಳ ಪ್ರಾಥಮಿಕ ಸಂಘಗಳ ಆಡಳಿತ ಮಂಡಲಿಗೆ ಸಾಮಾನ್ಯ ಚುನಾವಣೆಗಳು, ತತ್ಪರಿಣಾಮದ ಪದಾಧಿಕಾರಿಗಳ ಚುನಾವಣೆಗಳು ನಡೆದಿದ್ದು ಕೆಲವು ಸಹಕಾರ ಸಂಸ್ಥೆಗಳಲ್ಲಿ ಸಹಕಾರಿಗಳಲ್ಲಿ ನೂತನವಾಗಿ ಚುನಾಯಿತರಾದ ಮಂಡಲಿಗಳ /ಪದಾಧಿಕಾರಿಗಳ ಚುನಾವಣೆ ಮುಗಿದ ಕೂಡಲೇ ಅಧಿಕಾರ ವಹಿಸಿಕೊಳ್ಳಲು /ಪದಧಾರಣ ಮಾಡಲು ಒತ್ತಾಯ ಪಡಿಸುತ್ತಿರುವ ಅಂಶವನ್ನು ಆಯೋಗದ ಗಮನಕ್ಕೆ ತಂದಿರುತ್ತಾರೆ ಮತ್ತು ಈ ಕುರಿತು ಸ್ಪಷ್ಟ ನಿರ್ದೇಶನ ನೀಡುವಂತೆ ಆಯೋಗವನ್ನು ಕೋರಿರುತ್ತಾರೆ. ಈ ಹಿನ್ನೆಲೆಯಲ್ಲಿ ಈ ವಿಷಯ ಕುರಿತಂತೆ ಆಯೋಗವು ಕೆಳಕಂಡ ಅಂಶಗಳನ್ನು ಸ್ಪಷ್ಟಪಡಿಸಿದೆ.

**ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 28ಬಿ (1) ರೀತ್ಯಾ**

"**ಹೊಸದಾಗಿ ಚುನಾಯಿತವಾದ ಮಂಡಲಿಯ ಸದಸ್ಯರು ನಿರ್ಗಮಿಸುತ್ತಿರುವ ಮಂಡಲಿಯ ಪದಾವಧಿಯು ಮುಕ್ತಾಯವಾದ ಕೂಡಲೇ ಪದಧಾರಣ ಮಾಡುವುದನ್ನು ಖಚಿತಪಡಿಸುವ ಹಾಗೆ ಮಂಡಲಿಯ ಸದಸ್ಯರ ಚುನಾವಣೆಯನ್ನು ನಿರ್ಗಮಿಸುತ್ತಿರುವ ಮಂಡಲಿಯ ಪದಾವಧಿಯು ಮುಕ್ತಾಯವಾಗುವ ನಿಕಟ ಪೂರ್ವದಲ್ಲಿ ನಡೆಸತಕ್ಕದ್ದು**" ಎಂದಿರುತ್ತದೆ.

ಉಲ್ಲೇಖಿತ ಅಧಿಸೂಚನೆಯಂತೆ, ಆಯೋಗವು ದಿನಾಂಕ:31.03.2014ಕ್ಕೆ ಪ್ರಾಥಮಿಕ ಹಂತದ ಸಹಕಾರ ಸಂಘಗಳ /ಸಹಕಾರಿಗಳ ಮಂಡಲಿಗಳ ಅವಧಿ ಮುಗಿಯಲಿರುವ ಆಡಳಿತ ಮಂಡಲಿಗೆ ಮುಂದಿನ ಅವಧಿಗೆ ಚುನಾವಣೆ ನಡೆಸುವ ಬಗ್ಗೆ ಆಯೋಗವು ಕ್ರಮ ಕೈಗೊಂಡು ಚುನಾವಣೆ ಪ್ರಕ್ರಿಯೆ ಪ್ರಾರಂಭಿಸಿರುತ್ತದೆ. ಅದರಂತೆ ದಿನಾಂಕ: 02.02.2014 ರಿಂದ 02.03.2014ರ ಅವಧಿಯಲ್ಲಿ ನಿಗಧಿಪಡಿಸಿದ ವಿವಿಧ ವರ್ಗಗಳ ಪ್ರಾಥಮಿಕ ಹಂತದ ಸಹಕಾರ ಸಂಘಗಳ / ಸಹಕಾರಿಗಳ ಮಂಡಲಿಗೆ ಸಾಮಾನ್ಯ ಚುನಾವಣೆ /ತತ್ಪರಿಣಾಮದ ಪದಾಧಿಕಾರಿಗಳ ಚುನಾವಣೆ ಪ್ರಕ್ರಿಯೆ ಪೂರ್ಣಗೊಂಡಾಗ್ಯೂ ಸಹ ಹಿಂದಿನ ಮಂಡಲಿಯ ಅಧಿಕಾರದ ಪದಾವಧಿ, ಕಾನೂನು ರೀತ್ಯಾ ದಿನಾಂಕ:31.03.2014ರವರೆಗೆ ಇರುವ ಹಿನ್ನೆಲೆಯಲ್ಲಿ ಹೊಸದಾಗಿ ಉಲ್ಲೇಖಿತ ಅಧಿಸೂಚನೆಯಂತೆ ನಡೆಸಿದ ಚುನಾವಣೆಗಳಲ್ಲಿ ಆಯ್ಕೆಯಾದ /ಚುನಾಯಿತರಾದ ಮಂಡಲಿಯವರು, ಹೊರ ಹೋಗುತ್ತಿರುವ ಮಂಡಲಿಯ ಪದಾವಧಿ ಅಂತ್ಯಗೊಂಡ ನಂತರವೇ ಹೊಸದಾಗಿ ಚುನಾಯಿತರಾದ ಮಂಡಲಿಯು ಅಧಿಕಾರ ವಹಿಸಿಕೊಳ್ಳತಕ್ಕದ್ದಾಗಿದೆ. ಅಂದರೆ ದಿನಾಂಕ:01.04.2014 ರಿಂದ ಈಗಾಗಲೇ ಚುನಾವಣೆ ನಡೆಸಿರುವ ಪ್ರಾಥಮಿಕ ಹಂತದ ಸಹಕಾರ ಸಂಘಗಳ/ ಸಹಕಾರಿಗಳ, ಹೊಸ ಮಂಡಲಿಯವರ ಕಾರ್ಯನಿರ್ವಹಣೆ ಪ್ರಾರಂಭವಾಗುತ್ತದೆ ಎಂಬುದನ್ನು ಈ ಮೂಲಕ ಸ್ಪಷ್ಟಪಡಿಸಲಾಗಿದೆ.

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 29ಎ ದಲ್ಲಿ ಸಮಿತಿಯ ಅಧಿಕಾರಾವಧಿಯ ಆರಂಭದ ಬಗ್ಗೆ ವಿವರಿಸಲಾಗಿದೆ. ಸದರಿ ಪ್ರಕರಣದ ಉಪ ಪ್ರಕರಣ(1) ರಲ್ಲಿ ತಿಳಿಸಿರುವಂತೆ "**ಸಮಿತಿಯ ಚುನಾಯಿತ ಸದಸ್ಯರ ಪದಾವಧಿಯು, ಸಮಿತಿ ಸದಸ್ಯರ ಪೈಕಿ ಬಹುಮತದ ಸದಸ್ಯರು ಅಧಿಕಾರ ವಹಿಸಿಕೊಂಡ ದಿನಾಂಕದಂದು ಅಥವಾ ಹೊರ ಹೋಗುತ್ತಿರುವ ಸಮಿತಿಯ ಪದಾವಧಿಯು ಅಂತ್ಯಗೊಳ್ಳುವ ದಿನಾಂಕದಂದು, ಇದರಲ್ಲಿ ಯಾವುದು ನಂತರವೋ ಅಂದಿನಿಂದ ಪ್ರಾರಂಭವಾಗುವುದು**" ಎಂದಿರುತ್ತದೆ.

---3

ಮೇಲೆ ವಿವರಿಸಲಾದ ಅಧಿನಿಯಮದ ಅಂಶಗಳನ್ನು ಗಮನದಲ್ಲಿಟ್ಟುಕೊಂಡು, ಹೊಸದಾಗಿ ಚುನಾಯಿತವಾದ ಮಂಡಲಿ ಪದಧಾರಣ ಮಾಡತಕ್ಕದ್ದಾಗಿದೆ ಎಂಬ ಅಂಶವನ್ನು ಸ್ಪಷ್ಟೀಕರಿಸಲಾಗಿದೆ ಮತ್ತು ಆ ಪ್ರಕಾರ ಸಕ್ಷಮ ಪ್ರಾಧಿಕಾರಿಗಳು ಅಗತ್ಯ ಕ್ರಮ ಕೈಗೊಂಡು ಆಯೋಗಕ್ಕೆ ವರದಿಸುವಂತೆ ತಿಳಿಸಿದೆ.

(ಎನ್.ಸಿ. ಮುನಿಯಪ್ಪ)
ಸಹಕಾರ ಚುನಾವಣಾ ಆಯುಕ್ತರು
ಕರ್ನಾಟಕ ರಾಜ್ಯ, ಬೆಂಗಳೂರು

ಇವರಿಗೆ ಸೂಕ್ತ ಕ್ರಮಕ್ಕಾಗಿ :-

1) ಸಹಕಾರ ಸಂಘಗಳ ಜಂಟಿ ನಿಬಂಧಕರು, ಎಲ್ಲಾ ಪ್ರಾಂತ್ಯಗಳು
2) ಸಹಕಾರ ಸಂಘಗಳ ಉಪ ನಿಬಂಧಕರು, ಎಲ್ಲಾ ಜಿಲ್ಲೆಗಳು
3) ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಎಲ್ಲಾ ಉಪವಿಭಾಗಗಳು
4) ವ್ಯವಸ್ಥಾಪಕ ನಿರ್ದೇಶಕರು, ಎಲ್ಲಾ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕುಗಳು
5) ವ್ಯವಸ್ಥಾಪಕ ನಿರ್ದೇಶಕರು, ಎಲ್ಲಾ ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟಗಳು
6) ಎಲ್ಲಾ ಭೂ ಅಭಿವೃದ್ಧಿ ಅಧಿಕಾರಿ (ಸಹಕಾರಿ) ಕಾಡಾ,-----------------

ಪ್ರತಿಗಳು:-

1) ಸರ್ಕಾರದ ಕಾರ್ಯದರ್ಶಿ, ಸಹಕಾರ ಇಲಾಖೆ, ಬಹು ಅಂತಸ್ತುಗಳ ಕಟ್ಟಡ, ಬೆಂಗಳೂರು-01
2) ಸಹಕಾರ ಸಂಘಗಳ ನಿಬಂಧಕರು, ನಂ.1, ಅಲಿ ಆಸ್ಕರ್ ರಸ್ತೆ, ಬೆಂಗಳೂರು
3) ಸಹಕಾರ ಸಂಘಗಳ ಎಲ್ಲಾ ಅಪರ ನಿಬಂಧಕರುಗಳು, ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ.1, ಅಲಿ ಆಸ್ಕರ್ ರಸ್ತೆ, ಬೆಂಗಳೂರು-52.
4) ಸಹಕಾರ ಸಂಘಗಳ ಎಲ್ಲಾ ಜಂಟಿ ನಿಬಂಧಕರುಗಳು, ಸಹಕಾರ ಸಂಘಗಳ ನಿಬಂಧಕರ ಕಛೇರಿ, ನಂ.1, ಅಲಿ ಆಸ್ಕರ್ ರಸ್ತೆ, ಬೆಂಗಳೂರು-52.